**National**
**Kannada**
**03.08.2025 / 1.10pm**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
ಮುಖ್ಯಾಂಶಗಳು

<u>ಮುಖ್ಯಾಂಶಗಳು</u>

೧. ಬಿಹಾರದಲ್ಲಿ ಪರಿಷ್ಕೃತ ಮತದಾರರ ಪಟ್ಟಿ ಬಿಡುಗಡೆ; ಮೊದಲ ೨೪ ಗಂಟೆಗಳಲ್ಲಿ ಯಾವುದೇ ಆಕ್ಷೇಪಣೆ ಸಲ್ಲಿಸದ ರಾಜಕೀಯ ಪಕ್ಷಗಳು

೨. ಜಾಗತಿಕವಾಗಿ ಮೀನಿನ ಉತ್ಪಾದನೆಯಲ್ಲಿ ಭಾರತ ಎರಡನೇ ಸ್ಥಾನ; ಕಳೆದ ೧೧ ವರ್ಷಗಳಲ್ಲಿ ಶೇಕಡಾ ೧೦೩ ರಷ್ಟು ಹೆಚ್ಚಳ

೩. ಪ್ರತಿಕೂಲ ಹವಾಮಾನ ಪರಿಸ್ಥಿತಿ ಹಿನ್ನೆಲೆ; ಒಂದು ವಾರ ಮುಂಚಿತವಾಗಿಯೇ ಸ್ಥಗಿತಗೊಂಡ ಅಮರನಾಥ ಯಾತ್ರೆ

೪. ಡಬ್ಲ್ಯುಟಿಟಿ ಸ್ಟಾರ್ ಕಂಟೆಂಡರ್ ಟೇಬಲ್ ಟೆನಿಸ್; ಮಿಶ್ರ ಡಬಲ್ಸ್ ಫೈನಲ್‌ನಲ್ಲಿಂದು ಭಾರತದ ಮಾನುಶ್ - ದಿಯಾ ಜೋಡಿ ಸ್ಪರ್ಧೆ

೫. ಆಂಡರ್ಸನ್-ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಸರಣಿ; ನಾಲ್ಕನೇ ದಿನದಾಟದಲ್ಲಿಂದು ಭಾರತ ನೀಡಿರುವ ಗುರಿ ಬೆನ್ನತ್ತಲಿರುವ ಇಂಗ್ಲೆಂಡ್.

><><><><><><><><><><

ಬಿಹಾರದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಬಳಿಕ ತಾತ್ಕಾಲಿಕ ಮತದಾರರ ಪಟ್ಟಿಯನ್ನು ಬಿಡುಗಡೆಗೊಳಿಸಿದ ಮೊದಲ ೨೪ ಗಂಟೆಗಳಲ್ಲಿ ಯಾವುದೇ ರಾಜಕೀಯ ಪಕ್ಷದಿಂದ ಒಂದೂ ದೂರು ಅಥವಾ ಆಕ್ಷೇಪಣೆ ಸಲ್ಲಿಸಲಾಗಿಲ್ಲ ಎಂದು ಚುನಾವಣಾ ಆಯೋಗ ತಿಳಿಸಿದೆ. ಅರ್ಹ ಮತದಾರರ ಹೆಸರನ್ನು ಸೇರಿಸುವುದು ಅಥವಾ ಅನರ್ಹರ ಹೆಸರನ್ನು ತೆಗೆದು ಹಾಕುವ ಬಗ್ಗೆ ಯಾವುದೇ ರಾಜಕೀಯ ಪಕ್ಷದಿಂದ ಆಕ್ಷೇಪಣೆ ಸಲ್ಲಿಕೆಯಾಗಿಲ್ಲ ಎಂದು ಆಯೋಗ ಸ್ಪಷ್ಟಪಡಿಸಿದೆ.

><><><><><><><><><><

ಭಾರತ ಜಾಗತಿಕ ಮಟ್ಟದಲ್ಲಿ ಮೀನಿನ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ ಎಂದು ಕೇಂದ್ರ ಮೀನುಗಾರಿಕೆ ಸಚಿವ ರಾಜೀವ್ ರಂಜನ್ ಸಿಂಗ್ ತಿಳಿಸಿದ್ದಾರೆ. ಕೋಲ್ಕತ್ತಾದಲ್ಲಿ ನಿನ್ನೆ ಅವರು, ಪಶ್ಚಿಮ ಬಂಗಾಳ, ಬಿಹಾರ, ಜಾರ್ಖಂಡ್ ಹಾಗೂ ಛತ್ತೀಸ್‌ಗಢ ರಾಜ್ಯಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದರು. ಸಭೆಯಲ್ಲಿ ಮೀನಿನ ಉತ್ಪಾದನೆ ಹೆಚ್ಚಿಸುವುದು ಹಾಗೂ ಈ ಕ್ಷೇತ್ರ ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಚರ್ಚೆ ನಡೆಯಿತು. ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ, ಕಿಸಾನ್ ಕ್ರೆಡಿಟ್ ಕಾರ್ಡ್ ಮತ್ತಿತರ ಯೋಜನೆಗಳ ಬಗ್ಗೆಯೂ ಸಮಾಲೋಚನೆ ನಡೆಸಲಾಯಿತು. ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ೨೦೨೪-೨೫ ರಲ್ಲಿ ದೇಶದ ಮೀನಿನ ಉತ್ಪಾದನೆ, ೨೦೧೩-೧೪ ಕ್ಕೆ ಹೋಲಿಸಿದರೆ, ಶೇಕಡ ೧೦೩ ರಷ್ಟು ಹೆಚ್ಚಾಗಿದೆ. ಪಶ್ಚಿಮ ಬಂಗಾಳದ ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಕೆರೆಗಳಿದ್ದು, ಇವುಗಳ ಸಮರ್ಪಕ ಬಳಕೆಯಿಂದ ರಾಜ್ಯದಲ್ಲಿ ಮೀನಿನ ಉತ್ಪಾದನೆ ಹೆಚ್ಚಿಸಬಹುದು ಎಂದು ತಿಳಿಸಿದರು.

><><><><><><><><><

ಇದೇ ೯ ರಂದು ಮುಕ್ತಾಯಗೊಳಿಸಲು ನಿಗದಿಯಾಗಿದ್ದ ವಾರ್ಷಿಕ ಅಮರನಾಥ ಯಾತ್ರೆಯನ್ನು ಸುಮಾರು ಒಂದು ವಾರ ಮುಂಚಿತವಾಗಿಯೇ, ಇಂದಿನಿಂದ ಸ್ಥಗಿತಗೊಳಿಸಲಾಗಿದೆ. ನಿರಂತರ ಪ್ರತಿಕೂಲ ಹವಾಮಾನ ಪರಿಸ್ಥಿತಿ ಮತ್ತು ಯಾತ್ರಾ ಮಾರ್ಗಗಳ ಹದಗೆಡುತ್ತಿರುವ ಸ್ಥಿತಿಯೇ ಯಾತ್ರೆಯನ್ನು ಮೊದಲೇ ಸ್ಥಗಿತಗೊಳಿಸಲು ಕಾರಣ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಪ್ರದೇಶದಲ್ಲಿ ಭಾರೀ ಮಳೆಯಿಂದಾಗಿ ಮೂರು ದಿನಗಳ ಹಿಂದೆಯೇ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ನಿನ್ನೆ ಹಳಿಗಳ ಅಸುರಕ್ಷಿತ ಸ್ಥಿತಿ ಮತ್ತು ತುರ್ತು ದುರಸ್ತಿ ಕಾರ್ಯದ ಅಗತ್ಯದಿಂದಾಗಿ ಎರಡು ಸಾಂಪ್ರದಾಯಿಕ ಮಾರ್ಗಗಳಾದ ಬಾಲ್ತಾಲ್ ಅಥವಾ ಪಹಲ್ಗಾಮ್‌ನಿಂದ ಯಾತ್ರೆ ಪುನರಾರಂಭಗೊಳ್ಳುವುದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

><><><><><><><><><><

ಹರಿಯಾಣದ ಶಿಕೋಹ್‌ಪುರದಲ್ಲಿ ನಡೆದ ಭೂ ವ್ಯವಹಾರಕ್ಕೆ ಸಂಬಂಧಿಸಿದ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ನ್ಯಾಯಾಲಯವು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಪತಿ ಉದ್ಯಮಿ ರಾಬರ್ಟ್ ವಾದ್ರಾ ಅವರಿಗೆ ನೋಟಿಸ್ ಜಾರಿ ಮಾಡಿದೆ. ವಾದ್ರಾ, ಅವರ ಸಂಸ್ಥೆ ಸ್ಕೈ ಲೈಟ್ ಹಾಸ್ಪಿಟಾಲಿಟಿ, ಸತ್ಯಾನಂದ್ ಯಾಜಿ, ಕೇವಲ್ ಸಿಂಗ್ ವಿರ್ಕ್ ಮತ್ತು ಬ್ಲೂ ಬ್ರೀಜ್ ಟ್ರೇಡಿಂಗ್ ಎಲ್‌ಎಲ್‌ಪಿ ವಿರುದ್ಧ ಹಣ ವರ್ಗಾವಣೆ ಆರೋಪಗಳನ್ನು ಒಳಗೊಂಡ ೨೦೦೨ ರ ಹಣ ವರ್ಗಾವಣೆ ತಡೆ ಕಾಯ್ದೆ - ಪಿಎಂಎಲ್‌ಎ ಅಡಿಯಲ್ಲಿ ಇಡಿ ಸಲ್ಲಿಸಿದ ದೂರಿನ ಮೇರೆಗೆ ವಿಶೇ? ನ್ಯಾಯಾಧೀಶ ಸುಶಾಂತ್ ಚಂಗೋತ್ರ ಈ ಆದೇಶವನ್ನು ಹೊರಡಿಸಿದ್ದಾರೆ.

><><><><><><><><><><><><><><><

ಕಳೆದ ಎರಡು ದಿನಗಳಲ್ಲಿ ಇಬ್ಬರು ಭಯೋತ್ಪಾದಕರು ಸಾವನ್ನಪ್ಪಿ ಮತ್ತೊಬ್ಬರು ತೀವ್ರವಾಗಿ ಗಾಯಗೊಂಡ ನಂತರ, ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಸತತ ಮೂರನೇ ದಿನವಾದ ಇಂದೂ ಭದ್ರತಾ ಕಾರ್ಯಾಚರಣೆ ಮುಂದುವರೆದಿದೆ. ಕುಲ್ಗಾಮ್‌ನ ಅಖಾಲ್ ಅರಣ್ಯ ಪ್ರದೇಶದಲ್ಲಿ ಭಯೋತ್ಪಾದಕರು ಇರುವ ಬಗ್ಗೆ ಗುಪ್ತಚರ ಮಾಹಿತಿಯ ನಂತರ ಸೇನೆ, ಸಿಆರ್‌ಪಿಎಫ್ ಮತ್ತು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಸೇರಿದಂತೆ ಜಂಟಿ ಪಡೆಗಳು ಕಳೆದ ಶುಕ್ರವಾರ ಶೋಧ ಕಾರ್ಯಾಚರಣೆ ಪ್ರಾರಂಭಿಸಿದವು. ಶುಕ್ರವಾರ ಓರ್ವ ಭಯೋತ್ಪಾದಕನನ್ನು ಹತ್ಯೆಗೈಯಲಾಗಿತ್ತು, ಎರಡನೇ ದಿನವಾದ ನಿನ್ನೆ ಮತ್ತೋರ್ವ ಭಯೋತ್ಪಾದಕನನ್ನು ಹೊಡೆದುರುಳಿಸಲಾಯಿತು. ಮೂರನೇ ಭಯೋತ್ಪಾದಕ ತೀವ್ರವಾಗಿ ಗಾಯಗೊಂಡಿದ್ದಾನೆ. ಹತ್ಯೆಗೀಡಾದ ಇಬ್ಬರು ಭಯೋತ್ಪಾದಕರು ಸ್ಥಳೀಯರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಡಗಿರುವ ಭಯೋತ್ಪಾದಕರನ್ನು ಸುತ್ತುವರಿಯಲು ಭದ್ರತಾ ಪಡೆಗಳು ಡ್ರೋನ್‌ಗಳು, ಥರ್ಮಲ್ ಇಮೇಜಿಂಗ್ ಇತ್ಯಾದಿಗಳನ್ನು ಬಳಸುತ್ತಿವೆ. ಭದ್ರತಾ ಪಡೆಗಳು ಭಯೋತ್ಪಾದಕರ ವಿರುದ್ಧ ಆಕ್ರಮಣಕಾರಿ ಕಾರ್ಯಾಚರಣೆಗಳನ್ನು ಮುಂದುವರೆಸಿವೆ. ಈ ಕಾರ್ಯಾಚರಣೆ ಪಹಲ್ಗಾಮ್ ದಾಳಿಗೆ ಕಾರಣವಾದ ಮೂವರು ಪಾಕಿಸ್ತಾನದ ಭಯೋತ್ಪಾದಕರನ್ನು ನಿರ್ಮೂಲನೆ ಮಾಡುವ ಧ್ಯೇಯದ 'ಆಪರೇ?ನ್ ಮಹಾದೇವ್' ಕಾರ್ಯಾಚರಣೆಗಳ ಭಾಗವಾಗಿದೆ.

><><><><><><><><><><><><><><><><

ಜಪಾನ್‌ನ ಒಸಾಕಾದಲ್ಲಿ ನಡೆಯುತ್ತಿರುವ ವಿಶ್ವ ವಸ್ತುಪ್ರದರ್ಶನ ೨೦೨೫ ರ ಭಾರತೀಯ ಮಂಟಪವು ನಿನ್ನೆ ೨೦ ಸಾವಿರಕ್ಕೂ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಿತು.  ಭೇಟಿ ನೀಡಿದ ಜನರು ಭಾರತದ ಸಾಂಸ್ಕೃತಿಕ ಪರಂಪರೆ, ಬಾಹ್ಯಾಕಾಶ ಸಾಧನೆಗಳು ಮತ್ತು ಕರಕುಶಲ ವಸ್ತುಗಳ ಶ್ರೀಮಂತಿಕೆಯನ್ನು ವೀಕ್ಷಿಸಿದರು.  ಪ್ರದರ್ಶನದಲ್ಲಿನ ಇತರ ಆಕ?ಣೆಗಳಲ್ಲಿ 'ಚಂದ್ರಯಾನ ವಲಯ' ಎಂಬ ವಿಶಿ? ವಲಯ ಸೇರಿದೆ, ಇದು ಬಾಹ್ಯಾಕಾಶ ಪರಿಶೋಧನೆಯಲ್ಲಿ ಭಾರತದ ಸಾಧನೆಗಳು ಮತ್ತು ಚಂದ್ರನ ಕಾರ್ಯಾಚರಣೆಗಳನ್ನು ಪ್ರದರ್ಶಿಸುತ್ತದೆ. ಒಂದು-ಜಿಲ್ಲೆ ಒಂದು-ಉತ್ಪನ್ನ ವಲಯ ಜಮ್ಮು ಮತ್ತು ಕಾಶ್ಮೀರದ ವಾಲ್ನಟ್ ಮರದ ಕೆತ್ತನೆ ಮತ್ತು ಒಡಿಶಾದ ತಾರಕಾಶಿ ಕಲೆಯನ್ನು ಪ್ರದರ್ಶಿಸಿತು. 'ನಮ್ಮ ಜೀವನಕ್ಕಾಗಿ ಭವಿ?ದ ಸಮಾಜವನ್ನು ವಿನ್ಯಾಸಗೊಳಿಸುವುದು' ಅಕ್ಟೋಬರ್ ೧೩ ರವರೆಗೆ ನಡೆಯಲಿರುವ ಈ ಜಾಗತಿಕ ಪ್ರದರ್ಶನದ ಧ್ಯೇಯವಾಕ್ಯವಾಗಿದೆ. ಈ ಪ್ರದರ್ಶನ ೧೬೦ ಕ್ಕೂ ಹೆಚ್ಚು ದೇಶಗಳು ಮತ್ತು ೯ ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಭಾಗವಹಿಸುವಿಕೆಯನ್ನು ಕಂಡಿದೆ.

><><><><><><><><><><

ರಾಷ್ಟ್ರೀಯ ಭೂಕಂಪನ ಮೇಲ್ವಿಚಾರಣಾ ಕೇಂದ್ರದ ಪ್ರಕಾರ, ಇಂದು ಮುಂಜಾನೆ ಪಾಕಿಸ್ತಾನದ ವಿವಿಧ ಪ್ರದೇಶಗಳಲ್ಲಿ ೫.೧ ತೀವ್ರತೆಯ ಭೂಕಂಪ ಸಂಭವಿಸಿದೆ, ಇದರಲ್ಲಿ ಖೈಬರ್ ಪಖ್ತುನ್ಖ್ವಾ, ಇಸ್ಲಾಮಾಬಾದ್, ರಾವಲ್ಪಿಂಡಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಸೇರಿವೆ. ಇಸ್ಲಾಮಾಬಾದ್ ಮತ್ತು ರಾವಲ್ಪಿಂಡಿ ಅವಳಿ ನಗರಗಳಲ್ಲಿ ಕಂಪನದ ಅನುಭವವಾಗಿದೆ ಮತ್ತು ಹತ್ತಿರದ ಪ್ರದೇಶಗಳಾದ ಮರ್ದಾನ್, ಮುರ್ರ್ಈ, ಹರಿಪುರ್, ಚಕ್ವಾಲ್, ತಲಗಾಂಗ್ ಮತ್ತು ಕಲ್ಲರ್ ಕಹಾರ್‌ಗೂ ವಿಸ್ತರಿಸಿದೆ ಎಂದು ವರದಿಯಾಗಿದೆ. ರಾವತ್‌ನಿಂದ ಆಗ್ನೇಯಕ್ಕೆ ೧೫ ಕಿಲೋಮೀಟರ್ ದೂರದಲ್ಲಿ ಮತ್ತು ೧೦ ಕಿಲೋಮೀಟರ್ ಆಳದಲ್ಲಿ ಭೂಕಂಪದ ಕೇಂದ್ರಬಿಂದುವಿದ್ದು, ೫.೧ ತೀವ್ರತೆ ದಾಖಲಾಗಿದೆ.  ಸ್ಥಳೀಯ ಮಾಧ್ಯಮ ವರದಿಗಳ ಪ್ರಕಾರ, ಸುಮಾರು ೧೨:೧೦ ಗಂಟೆಗೆ ಕಂಪನ ಸಂಭವಿಸಿದೆ..ನಿನ್ನೆ ಖೈಬರ್ ಪಖ್ತುಂಖ್ವಾ, ಪಂಜಾಬ್ ಮತ್ತು ರಾಜಧಾನಿ ಇಸ್ಲಾಮಾಬಾದ್‌ನ ಕೆಲವು ಭಾಗಗಳಲ್ಲಿ ೫.೪ ತೀವ್ರತೆಯ ಭೂಕಂಪ ಸಂಭವಿಸಿದೆ.

><><><><><><><><><><

ಉತ್ತರಪ್ರದೇಶದ ಗೊಂಡ ಪ್ರದೇಶದಲ್ಲಿ ರಸ್ತೆ ಅಪಘಾತ ಸಂಭವಿಸಿದ್ದು, ಕನಿಷ್ಠ ಹನ್ನೊಂದು ಮಂದಿ ಮೃತಪಟ್ಟಿದ್ದಾರೆ. ನಾಲ್ಕು ಮಂದಿಗೆ ಗಾಯಗಳಾಗಿವೆ. ಸ್ಥಳೀಯ ಪೊಲೀಸರ ಪ್ರಕಾರ, ಪೃಥ್ವಿನಾಥ್ ದೇವಾಲಯಕ್ಕೆ ಪ್ರಯಾಣ ಬೆಳೆಸಿದ್ದ ೧೫ ಮಂದಿ ಭಕ್ತರನ್ನು ಹೊತ್ತೊಯ್ಯುತ್ತಿದ್ದ ಬೊಲೆರೊ ವಾಹನ ರೆಹ್ರಾ ಗ್ರಾಮದ ಕಾಲುವೆಯೊಂದರಲ್ಲಿ ಉರುಳಿದ ಪರಿಣಾಮ ಈ ಅಪಘಾತ ಸಂಭವಿಸಿದೆ. ಕಾಲುವೆಯಿಂದ ೧೧ ಮೃತದೇಹಗಳನ್ನು ತೆಗೆಯಲಾಗಿದ್ದು, ನಾಲ್ಕು ಮಂದಿಯನ್ನು ರಕ್ಷಿಸಲಾಗಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಮೃತಪಟ್ಟವರ ಕುಟುಂಬಸ್ಥರಿಗೆ ತಲಾ ಐದು ಲಕ್ಷ ರೂಪಾಯಿ ಪರಿಹಾರ ಘೋಷಣೆ ಮಾಡಿದ್ದಾರೆ.

><><><><><><><><><

ಕಪ್ಪು ಸಮುದ್ರ ಮತ್ತು ಅಜೋವ್ ಸಮುದ್ರದ ಸೇರಿದಂತೆ ವಿವಿಧ ಪ್ರದೇಶಗಳ ಮೇಲೆ ಹಾರಾಟ ನಡೆಸುತ್ತಿದ್ದ ಉಕ್ರೇನ್‌ನ ೧೧೨ ಡ್ರೋನ್‌ಗಳನ್ನು ರಷ್ಯಾ ವಾಯುಪಡೆ ಕಳೆದ ರಾತ್ರಿ ಹೊಡೆದುರುಳಿಸಿದೆ. ಇವು ಉಕ್ರೇನ್‌ನ ಮಾನವರಹಿತ ಸ್ಥಿರರೆಕ್ಕೆಯ ಡ್ರೋನ್‌ಗಳಾಗಿದ್ದವು ಎಂದು ರಷ್ಯಾದ ಟಿಎಎಸ್‌ಎಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

><><><><><><><><><

ಬ್ರೆಜಿಲ್‌ನಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಸ್ಟಾರ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಭಾರತ ತನ್ನ ಪ್ರಬಲ ಪ್ರದರ್ಶನವನ್ನು ಮುಂದುವರಿಸಿದ್ದು, ಮಿಶ್ರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿಂದು ಭಾರತದ ಮಾನುಶ್ ಶಾ ಮತ್ತು ದಿಯಾ ಚಿತಳೆ ಜೋಡಿ ಕಣಕ್ಕಿಳಿಯುತ್ತಿದೆ. ಈ ಪಂದ್ಯ ಭಾರತೀಯ ಕಾಲಮಾನ ರಾತ್ರಿ ೯ ಗಂಟೆಗೆ ಆರಂಭವಾಗಲಿದೆ. ಭಾರತದ ಅಗ್ರ ಮತ್ತು ವಿಶ್ವ ಹತ್ತನೇ ಶ್ರೇಯಾಂಕಿತ ಈ ಜೋಡಿ, ಕ್ವಾರ್ಟರ್ ಫೈನಲ್ ಹಾಗೂ ಸೆಮಿಫೈನಲ್‌ನಲ್ಲಿ ಚಿಲಿ ತಂಡಗಳ ವಿರುದ್ಧ ಗೆಲುವು ಸಾಧಿಸಿ, ಫೈನಲ್‌ಗೆ ಲಗ್ಗೆ ಇಟ್ಟಿದೆ. ಇಂದು ನಡೆಯಲಿರುವ ಪಂದ್ಯದಲ್ಲಿ ಮಾನುಶ್-ದಿಯಾ ಜೋಡಿ, ಜಪಾನ್‌ನ ಸಾತೋಶಿ ಹೈದಾ ಮತ್ತು ಹೊನಕೊ ಹಾಶಿಮೊತೊ ಜೋಡಿ ವಿರುದ್ಧ ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿದೆ.

><><><><><><><><><

ಲಂಡನ್‌ನ ಓವಲ್‌ನಲ್ಲಿ ನಡೆಯುತ್ತಿರುವ ಆಂಡರ್ಸನ್-ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯ ಐದನೇ ಹಾಗೂ ಕೊನೆಯ ಪಂದ್ಯದ ನಾಲ್ಕನೇ ದಿನದಾಟದಲ್ಲಿಂದು ಭಾರತದ ವಿರುದ್ಧ ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ ೧ ವಿಕೆಟ್ ನಷ್ಟಕ್ಕೆ ೫೦ ರನ್‌ಗಳಿಸಿರುವ ಇಂಗ್ಲೆಂಡ್, ಭಾರತ ನೀಡಿರುವ ೩೭೪ ರನ್‌ಗಳ ಗುರಿಯನ್ನು ಬೆನ್ನತ್ತಲಿದೆ.  ಇಂದಿನ ದಿನದಾಟ ಭಾರತೀಯ ಕಾಲಮಾನ ಮಧ್ಯಾಹ್ನ ೩.೩೦ ಕ್ಕೆ ಆರಂಭವಾಗಲಿದೆ.

><><><><><><><><><><